ಪ್ರೀತಿಸ್ತಿದ್ದಾರೆ. ಆ ಉಡುಪು ಇರಲಿ, ಇಲ್ಲದಿರಲಿ, ಅವರು ಮದುವೆಯಾಗಬೇಕೆಂದಿದ್ದಾರೆ.'

ಒಳಕೋಣೆಯಿಂದ ಸಾರಾಳ ಧ್ವನಿ ದೊಡ್ಡದಾಗಿ ಕೇಳಿಸಿತು. 'ಲಂಗ ಮತ್ತಿತರ ಉಡುಪುಗಳಿಲ್ಲದೇ ನನ್ನ ಮದುವೆ ಸಾಧ್ಯವೇ ಇಲ್ಲ' ಎಂದಳವಳು.

'ಈ ಮನೆ ಒಂದು ಬೆಂಕಿ ಪೊಟ್ಟಣದಂತಿದೆ. ಹೊಸದಾಗಿ ಮದುವೆಯಾದವರಿಗೆ ಎಲ್ಲಿ ಜಾಗ ಮಾಡಲಿ? ಹಾಗಾಗಿ ಅವರಿಗೆ ಆ ಕೋಣೆ ತೆರವು ಮಾಡಿಕೊಡಲು ನಾವು ಪಿಯಾನೊವನ್ನು ಮಾರಲೇಬೇಕು. ಈಗ ಇಲ್ಲಿ ಬೇರೆ ಯಾವುದೂ ಪ್ರತ್ಯೇಕ ಕೋಣೆ ಇಲ್ಲ' ಎಂದು ರೊಸಾಲಿಯ ಮಾತು ಮುಂದುವರಿಸಿದಳು.

ಪುನಃ ಸಾರಾಳ ಧ್ವನಿ ಕೇಳಿ ಬಂತು. 'ಬೇಡ, ಪಿಯಾನೊ ಮಾರಬೇಡಿ. ಅದು ಇಷ್ಟು ಚೆನ್ನಾಗಿದೆ...'

ಅವಳ ತಾಯಿ ಮಧ್ಯೆ ಬಾಯಿ ಹಾಕಿ, 'ಅದರಿಂದ ಯಾವ ಸದ್ದೂ ಹೊರಡುವುದಿಲ್ಲ. ನೀನದನ್ನು ನುಡಿಸುತ್ತಾನೇ ಇಲ್ಲ. ಬರೇ ಸರಿಗಪ ನುಡಿಸಿದರೆ ಸಾಕಾ?' ಎಂದಳು.

ಆಕೆ ಮಗಳೊಡನೆ ಮುಂದಿನ ಮಾತುಗಳನ್ನಾಡುವುದಕ್ಕೆ ಎದ್ದು ಅವಳ ಕೋಣೆಗೆ ಹೋದಳು. ಸಾರಾಳ ಮಾತು ವಿಚಿತ್ರ. ರೊಸಾಲಿಯ ಈ ದ್ವಂದ್ವವನ್ನು ನೇರವಾಗಿ ಹೇಳಿದಳು. 'ಗಂಡ, ಅಥವಾ ಪಿಯಾನೊ. ನೀನೇ ಆಯ್ದುಕೋ.'

'ಓಹ್, ಗಂಡ. ಖಂಡಿತವಾಗಿ' ಎಂದು ಸಾರಾ ನಿಶ್ಚಿತ ಧ್ವನಿಯಲ್ಲಿ ದಿಂಬನ್ನು ಹಿಡಿದು ಹೇಳಿದಳು.

'ಹಾಗಿದ್ದರೆ...?'

'ನಿನಗೆ ಯಾವಾಗಲೂ ಅದರ ಮೇಲೆ ಕಣ್ಣು, ರೊಸಾಲಿಯ' ಎಂದು ಕೂಗಿ ಹೇಳಿದ ಯಾವ್ವೋ ದೆ ಒಲಿವ್ಯೆರಾ.

'ಯಾವುದರ ಮೇಲೆ?'

'ನಮ್ಮ ಪಿಯಾನೊದ ಮೇಲೆ.'

'ಓಹ್, ಯಾವ್ವೋ, ನೀನೂ ಹೀಗೆ ಹೇಳೋದಾ?'

ಮರುದಿನ ಕೆಲಸ ಮುಗಿಸಿ ಬಂದವನೇ ಯಾವ್ವೋ ದೆ ಒಲಿವ್ಯೆರಾ ಪಿಯಾನೊದ ಬಗ್ಗೆ ವಿಚಾರಿಸಿದ.

'ರೊಸಾಲಿಯ, ಜಾಹೀರಾತು ನೋಡಿ ಇವತ್ತು ಯಾರಾದರೂ ಬಂದಿದ್ದರೇ?'

'ಹೌದು. ದೂರವಾಣಿಯಲ್ಲಿ ಪಿಯಾನೊ ಬಗ್ಗೆ ಅನೇಕ ಕರೆಗಳು ಬಂದಿದ್ದವು. ಒಬ್ಬ ಮುದುಕ ನೋಡಲು ಬಂದಿದ್ದ. ಅಲ್ಲದೆ ಆ ಕೆಂಚುಗೂದಲಿನವನೂ ಪುನಃ ಬಂದಿದ್ದ.'

'ಯಾರಾದರೂ ಅದನ್ನು ಖರೀದಿಸುವ ಬಗ್ಗೆ ಏನಾದರೂ ಹೇಳಿದರೇ?'

'ಇಲ್ಲ. ಮನೆಗೆ ಬಂದ ಇಬ್ಬರೂ ಬಹಳ ಹೊತ್ತು ಅದನ್ನು ನೋಡುತ್ತಾ ಇದ್ದರು.'

'ಹೌದಾ? ಆಸಕ್ತಿಯಿಂದ ನೋಡಿದರೇ? ಮೆಚ್ಚುಗೆಯಿಂದ ನೋಡಿದರೇ?'

'ಅದನ್ನು ಹೇಳಲಿಕ್ಕಾಗುವುದಿಲ್ಲ.'

ಸಾರಾ, 'ಹೌದು, ಅವರು ಮೆಚ್ಚಿದ್ದಾರೆ. ಮುದುಕನಂತೂ ಕಣ್ಣಿನಿಂದಲೇ ಅದನ್ನು ನುಂಗುವಂತೆ ನೋಡಿದ' ಎಂದಳು.

ಯಾವ್ವೋ ದೆ ಒಲಿವ್ಯೆರಾನ ಮನ ಮಿಡಿಯಿತು. ಅದು ಬೆಲೆಯ ಬಗ್ಗೆ ಆಗಿರಲಿಲ್ಲ. ಪಿಯಾನೊಗೆ ಸಿಗಬೇಕಾಗಿದ್ದ ಯೋಗ್ಯತೆ ಮತ್ತು ಗೌರವ ಸಂದಾಯವಾದರೆ ಸಾಕು ಎಂದವನು ಬಯಸಿದ, ಅಷ್ಟೇ. ಬಹುಶಃ ಅದಕ್ಕೆ ತುಂಬ ಬೆಲೆ ಸಿಗದಿರಬಹುದು. ಆದರೆ, ಖಂಡಿತವಾಗಲೂ ಒಂದಷ್ಟು ವಿನೀತ ಲಕ್ಷ್ಯಕ್ಕೆ ಅದು ಯೋಗ್ಯವಾಗಿದೆ. ಅವರು ಬಂದ ಹೊತ್ತಿನಲ್ಲಿ ತಾನು ಅಲ್ಲಿ ಇರದಿದ್ದುದಕ್ಕೆ ಅವನಿಗೆ ವಿಷಾದವೆನಿಸಿತು. ಆದರೆ, ಹಿಂದಿನ ದಿನದ ಅಸಹ್ಯದ ಬದಲಾಗಿ ಆ ಮುದುಕನ ಗೌರವಪೂರ್ಣ ನಡವಳಿಕೆಯನ್ನು ಮಗಳು ಹೇಳಿದಾಗ ಸಮಾಧಾನವೆನ್ನಿಸಿತು. ಪ್ರಾಚ್ಯ ವಸ್ತುಗಳ ಮೌಲ್ಯ ಅವನಿಗೆ ತಿಳಿದಿರಬೇಕು.

'ಅವನೇನಾದರೂ ಅವನ ವಿಳಾಸ ಕೊಟ್ಟಿದ್ದಾನೆಯೇ ಸಾರಾ? ಓಹ್, ಬಿಡು. ಅವನು ಮತ್ತೆ ಬರಬಹುದು.' ಕೂತ ಕುರ್ಚಿಯಿಂದ ಎದ್ದ ಅವನು ಆ ಹಳೆಯ ವಾದ್ಯಕ್ಕೆ ಒಂದು ಸುತ್ತು ಹಾಕಿ ಬಂದ. ಮಮತೆಯಿಂದ ಒಂದು ನಗು ಬೀರಿದ. 'ನನ್ನೊಲವಿನ ಪಿಯಾನೊ' ಎಂದು ಮೆತ್ತಗೆ ಉಸುರಿದ. ಒಂದು ಪ್ರಾಣಿಯ ಮೈ ಮೇಲೆ ಕೈಯಾಡಿಸುವಂತೆ ನಯವಾಗಿ ಅದರ ಪಾಲಿಶ್ ಮಾಡಿದ ಹಲಗೆಯನ್ನು ಸವರಿದ.

ಮರುದಿನ ಯಾವ ಅಭ್ಯರ್ಥಿಯೂ ಬರಲಿಲ್ಲ. ವಿದೇಶೀ ಉಚ್ಚಾರಣೆಯ ಒಂದು ಕರೆ 'ಅದು ಹೊಸದೇ' ಎಂದು ಕೇಳಿತು. ರೊಸಾಲಿಯ, 'ಹೊಸದೇನೂ ಅಲ್ಲ, ಆದರೆ ಹೊಸದರಂತೆ ಕಾಣುವ